## X ಉಪ್ಪಿನಂಗಡಿ ಕ್ಷೇತ್ರದ ನಿಡ್ಲ ಗ್ರಾಮದಲ್ಲಿ ನಡೆದ ಕೊಲೆಯನ್ನು ಮುಚ್ಚಿಡಲು ಪ್ರಯತ್ನಿಸಿರುವುದು

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ ಉಪ್ಪಿನಂಗಡಿ ಪೋಲೀಸ್ ಸ್ಟೇಷನ್‌ನಲ್ಲಿ ಶ್ರೀಯುತ ಮಿರ್ಜ ಎಂಬುವರು ಎಸ್.ಐ. ಆಗಿದ್ದರು, ಸದರಿಯವರು ನನ್ನ ಕ್ಷೇತ್ರದ ನಿಡ್ಲ ಗ್ರಾಮದಲ್ಲಿ ಸುಮಾರು ಒಂದು ವರ್ಷದ ಹಿಂದೆ ನಡೆದ ಕೊಲೆ ಮೊಕದ್ದಮೆಯನ್ನು ಮುಚ್ಚಿಡಲು ಸರ್ವ ಪ್ರಯತ್ನ ನಡೆಸಿದರು. ಅಲ್ಲದೇ ಭ್ರಷ್ಟಾಚಾರದಿಂದ ತುಂಬಿ ತುಳುಕಿದವರು. ಸದರಿ ಕೊಲೆ ಮೊಕದ್ದಮೆಯ ವಿಚಾರದಲ್ಲಿ ನಾನು ಸ್ವತಃ ಅನೇಕ ಸಲ ಫೋನ್ ಹಾಗೂ ಪತ್ರ ಮುಖಾಂತರ ಸದರಿಯವರಿಗೆ ತಿಳಿಸಿದಾಗ ಅವರು ಕೊಲೆಯಲ್ಲಿ ಸದರಿ ಆಸಾಮಿ ತಲೆಮರೆಸಿ ಕೊಂಡಿದ್ದಾರೆ ಎಂದು ನನಗೆ ಉತ್ತರವಿತ್ತರು. ಕೊನೆಗೆ ನಾನು ಸದರಿ ವಿಚಾರದಲ್ಲಿ ಕಳೆದ ಸಲ ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಿದ ನಂತರವೂ ಕೂಡ ಸುಮಾರು ಒಂದು ತಿಂಗಳ ತನಕ ಪತ್ತೆ ಮಾಡುವ ನಿರ್ಧಾರಕ್ಕೆ ಕೈಹಾಕದೆ ಸುಮ್ಮನಿದ್ದವರು ಕೊನೆಗೆ ಸರಕಾರದ ಒತ್ತಡ ಜಾಸ್ತಿಯಾದ ನಂತರ ಡಿ.ವೈ.ಎಸ್.ಪಿ. ಹಾಗೂ ಸರ್ಕಲ್ ಇನ್ಸ್‌ಪೆಕ್ಟರರು ಮುತುವರ್ಜಿ ವಹಿಸಿದ ನಂತರ ಆರೋಪಿಯು ಪತ್ತೆಯಾಗಿ ಸುಮಾರು ೧ ವರ್ಷ ೮ ತಿಂಗಳ ಹಿಂದೆ ಕೊಂದು ಹೂತಿಟ್ಟ ಶವದ ಪತ್ತೆಯಾಯಿತು. ಆದರೆ ನಂತರವೂ ಸದರಿ ಎಸ್.ಐ.ಯವರು ಕೊಲೆ ಆರೋಪಿಗೆ ಸಹಕಾರ ನೀಡಿ ಅಂದರೆ ರೆಕಾರ್ಡ್ ಗಳನ್ನು ಭದ್ರ ಮಾಡದೆ ಸದರಿಯವರನ್ನು ಜಾಮೀನು ಪಡೆದು ಬಿಡುಗಡೆ ಮಾಡುವಲ್ಲಿ ಯಶಸ್ವಿಯಾದರು. ತದನಂತರ ಅವರಿಗೆ ವರ್ಗಾವಣೆಯಾಯಿತು. ಅವರು ಚಾರ್ಜ್ ಕೊಟ್ಟು ಬೇರೆ ಕಡೆಗೆ ವರ್ಗವಾಗಿ ಹೋದರು. ಅವರು ಬೇರೆ ಸ್ಟೇಷನ್ನಿಗೆ ಹೋಗಿ ಚಾರ್ಜ್ ತೆಗೆದುಕೊಂಡು ಕೇವಲ ಒಂದು ವಾರದೊಳಗೆ ಪುನಃ ಅದೇ ಸ್ಟೇಷನ್ನಿಗೆ ಮರು ವರ್ಗಾವಣೆಯಾಗಿ ಬಂದರು. ಇವರಿಗೆಲ್ಲಾ ಪ್ರಿಮೆಚ್ಯೂರ್ ವರ್ಗಾವಣೆ ಲಾಗು ಆಗುವುದಿಲ್ಲವೇ? ಅಥವಾ ಭ್ರಷ್ಟಾಚಾರ ಹಾಗೂ ಕೊಲೆ ಮೊಕದ್ದಮೆ ಮುಚ್ಚಿಟ್ಟಿದ್ದಕ್ಕೆ ಅಲ್ಲದೇ ಕೊಲೆ ಆರೋಪಿಗಳನ್ನು ಜಾಮೀನು ಮೇಲೆ ಬಿಡುಗಡೆ ಮಾಡಿಸಿದ್ದಕ್ಕೆ ಇದು ಪುರಸ್ಕಾರವೇ? ಈ ಎಲ್ಲಾ ವಿಚಾರವನ್ನೂ ನಾನು ಸರಕಾರದ ಗಮನಕ್ಕೆ ತಂದ ನಂತರ ಸದರಿಯವರನ್ನು ಅಮಾನತ್ತಿನಲ್ಲಿಟ್ಟು ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳುವ ಬದಲಾಗಿ ವರ್ಗಾವಣೆ ಆಗಿ ಹೋಗಿ ಒಂದು ವಾರದಲ್ಲಿ ಮರುವರ್ಗಾವಣೆ ಆಗುವುದೆಂದರೆ ಇದು ಸರಕಾರಕ್ಕೆ ನಾಚಿಕೆಗೇಡಿನ ವಿಷಯವಾಗಿದೆ. ನನ್ನ ಕ್ಷೇತ್ರದ ಜನತೆ ಹೆದರಿ ಕಂಗಾಲಾಗಿದ್ದಾರೆ. ಇನ್ನೂ ನಮಗೆ ರಕ್ಷಣೆ ದೊರೆಯುವುದಿಲ್ಲ ಎಂಬ ಭಾವನೆ ಜನರಲ್ಲಿ ಮೂಡಿದೆ. ಸದರಿಯವರನ್ನು ತಕ್ಷಣ ಅಲ್ಲಿಂದ ವರ್ಗಾವಣೆ ಮಾಡಿ ಅವರ ಮೇಲಿರುವ ಆಪಾದನೆ ವಿಚಾರದಲ್ಲಿ ಸೂಕ್ತ ತನಿಖೆ ನಡೆಸಿ ತಕ್ಕ ಕ್ರಮ ಕೈಗೊಂಡು ನ್ಯಾಯ ಕಾಪಾಡಬೇಕಾಗಿ ಈ ಮೂಲಕ ವಿನಂತಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಇದುವರೆಗೂ ತೆಗೆದುಕೊಂಡಿರತಕ್ಕಂಥ ಕ್ರಮ ಎದ್ದು ಕಾಣುತ್ತದೆ. ಒಂದು ವರ್ಷದ ಹಿಂದೆ ಕೊಲೆಯಾಗಿರತಕ್ಕಂಥದ್ದನ್ನು ಪುನಃ ಪತ್ತೆ ಮಾಡಿ, ಅದು ಕೊಲೆಯಾಗಿದೆ ಎಂಬುದಾಗಿ ಕೇಸನ್ನು ದಾಖಲು ಮಾಡಿಕೊಂಡು ಕೋರ್ಟಿನಲ್ಲಿ ಅದು ನಡೆಯುತ್ತಿದೆ. ಬಹುಶಃ ಒಂದು ವರ್ಷ ೮ ದಿನಗಳಾದ ಮೇಲೆ ಅವರನ್ನೇ ಪುನಃ ಅಲ್ಲಿ ವರ್ಗ ಮಾಡಿದ್ದಾರೆಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಈ ವಿಚಾರ ನನಗೆ ಇವತ್ತೇ ತಿಳಿದದ್ದು. ವಿತಕ್ಕೋಸ್ಕರ ಅವರನ್ನು ಅಲ್ಲಿಗೇ ಪುನಃ ವರ್ಗ ಮಾಡಿದ್ದಾರೆ? ಅದೂ ಅವರು ತಪ್ಪಿತಸ್ಥರು ಅಲ್ಲವೋ ಅಥವಾ ಉಂಟೋ ಆ ವಿಷಯ ವನ್ನು ಅಧಿಕಾರಿಗಳಿಂದ ತಿಳಿದುಕೊಂಡು ಮಾನ್ಯ ಸದಸ್ಯರಿಗೆ ಆ ಬಗ್ಗೆ ವಿವರಗಳನ್ನು ಕೊಡುತ್ತೇನೆ.

## XI ಜಿಲ್ಲೆ ಮತ್ತು ತಾಲ್ಲೂಕುಗಳ ಪುನರ್ ವಿಂಗಡಣೆ ಸಮಿತಿಯ ವರದಿಯನ್ನು ಸಭೆಯ ಮುಂದೆ ಮಂಡಿಸಲು ಮನವಿ

ಶ್ರೀ ಪಂಪಾಪತಿ.—ಸನ್ಮಾನ್ಯ ಅಧ್ಯಕ್ಷರೆ, ಜನತೆಯ ಅನುಕೂಲಕ್ಕಾಗಿ ಮತ್ತು ಆಡಳಿತ ಸುಧಾರಣೆ ದೃಷ್ಟಿಯಿಂದ ತಾಲ್ಲೂಕುಗಳು ಮತ್ತು ಜಿಲ್ಲೆಗಳ ಪುನರ್‌ವಿಂಗಡನೆಯನ್ನು ಮಾಡುವ ಉದ್ದೇಶದಿಂದ ಜಿಲ್ಲಾ ಪುನರ್ ವಿಂಗಡಣಾ ಸಮಿತಿಯನ್ನು ಶ್ರೀಮಾನ್ ಉಡೇಕಾರ್‌ರವರ ಅಧ್ಯಕ್ಷತೆಯಲ್ಲಿ ರಚಿಸಿದ್ದು, ಈ ಮೇಲೆ ಕಾಣಿಸಿದ ಸಮಿತಿ ರಾಜ್ಯದ ಅನೇಕ ಜಿಲ್ಲೆಗಳನ್ನು ಮತ್ತು ತಾಲ್ಲೂಕು ಗಳನ್ನು ಸಂದರ್ಶಿಸಿ ಅಲ್ಲಿ ಜನತೆಯ ಅಭಿಪ್ರಾಯಗಳನ್ನು ಪಡೆದು ನಮ್ಮ ಕರ್ನಾಟಕ ದಿನಾಂಕ ೧೪-೮-೬೬ರಂದು ವರದಿಯನ್ನು ಸಲ್ಲಿಸಿರುವುದಾಗಿ ''ಸಂಜಯ-ವಾಣಿ'' ದಿನ ಪತ್ರಿಕೆಯಲ್ಲಿ ಅದೇ ದಿನ ವರದಿಯಾಗಿದೆ. ಆ ವರದಿಯನ್ನು ಮಾನ್ಯ ಮುಖ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸ

ಬೇಕೆಂದು ಮತ್ತು ಯಾವ ಯಾವ ತಾಲ್ಲೂಕುಗಳನ್ನು ಮತ್ತು ಯಾವ ಯಾವ ಜಿಲ್ಲೆಗಳನ್ನು ಪುನರ್-ವಿಂಗಡಿಸಿದ್ದಾರೆಂದು ಈ ಮನೆಯ ಸದಸ್ಯರ ಗಮನಕ್ಕೆ ತರಬೇಕೆಂದು ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಉಂಡೇಕಾರ್‌ರವರ ಪರದಿ ಸರ್ಕಾರದ ಪರಿಶೀಲನೆಗೆ ಬರಬೇಕು ಅದನ್ನು ಪರಿಶೀಲಿಸಿದ ನಂತರ ಅದರ ಬಗ್ಗೆ ಸರ್ಕಾರದ ಧೋರಣೆ ಏನು ಏನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆ ಕೆಲಸವನ್ನು ಬೇಗ ಮಾಡತಕ್ಕಂತಹ ಆಶ್ವಾಸನೆಯನ್ನು ಸನ್ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

## XII ಮೈಸೂರು ನಗರ ಪಾಲಿಕೆಯ ಪೌರ ಕಾರ್ಮಿಕರಿಗೆ ಸಾರ್ವತ್ರಿಕ ರಜಾ ದಿನಗಳನ್ನು ಕೊಡದಿರುವುದು

ಶ್ರೀ ವೇದಾಂತ ಹೆಬ್ಬಿಗೆ.—ಮೈಸೂರು ನಗರ ಪಾಲಿಕೆಯಲ್ಲಿ ಸುಮಾರು ೮೦೦ ಮಂದಿ ಪೌರ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇದುವರೆವಿಗೆ ಇವರುಗಳಿಗೆ ಸಾರ್ವತ್ರಿಕ ರಜಾ ದಿನಗಳು ದೊರಕುತ್ತಿಲ್ಲ ಮತ್ತು ಈ ದಿವಸಗಳಲ್ಲಿ ಅವರುಗಳು ಕೆಲಸ ಮಾಡಿದರೂ ಕಾನೂನಿನಂತೆ ಕೊಡಬೇಕಾದ ವೇತನ ಭತ್ಯ ದೊರಕುತ್ತಿಲ್ಲ, ಆದರೆ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ನೌಕರರಿಗೆ ಮಾತ್ರ ಸಾರ್ವತ್ರಿಕ ರಜಾ ದಿನಗಳಲ್ಲಿ ಕೆಲಸ ಮಾಡಿದರೂ ಅವರಿಗೆ ಕಾನೂನಿನಂತೆ ಅಧಿಕ ಭತ್ಯ ನೀಡುತ್ತಿರುವುದು ನ್ಯಾಯ ಯುತವಾದ ನೀತಿಯಲ್ಲ. ಮೈಸೂರು ನಗರದ ನಿರ್ಮಲೀಕರಣದ ಜವಾಬ್ದಾರಿಯನ್ನು ಹೊತ್ತಿರುವ ಈ ಪೌರ ಕಾರ್ಮಿಕರಿಗೆ ಸಾರ್ವತ್ರಿಕ ರಜಾ ದಿನಗಳನ್ನು ಘೋಷಿಸಲು ಸರಕಾರವು ಕ್ರಮ ಕೈಗೊಳ್ಳಬೇಕು. ಇಲ್ಲವೇ ಕೆಲಸ ಮಾಡುವ ಆ ದಿನಗಳಿಗೆ ಅಧಿಕ ಭತ್ಯ ನೀಡಲು ಆದೇಶ ನೀಡಬೇಕು ಎಂದು ಒತ್ತಾಯಿಸಿ ಸಂಬಂಧಪಟ್ಟ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಈ ನಗರ ಸಭೆಗಳಲ್ಲಿ ಮತ್ತು ಪುರ ಸಭೆಗಳಲ್ಲಿ ನಗರದ ನಿರ್ಮಲೀಕರಣದಲ್ಲಿ ನಿರತರಾಗಿರತಕ್ಕಂತಹವರಿಗೆ ಭಾನುವಾರ ಅಥವಾ ಶನಿವಾರ ರಜಾ ಇಲ್ಲ ಎಂಬುದು ಸನ್ಮಾನ್ಯ ಸದಸ್ಯರಿಗೆ ಗೊತ್ತಿದೆ. ಆದರೆ ಅವರಿಗೆ ಬೇರೆ ದಿನ ರಜಾ ಕೊಡತಕ್ಕಂತಹ ವ್ಯವಸ್ಥೆ ಇದೆ. ಇದು ಪ್ರತಿನಿತ್ಯ ನಡೆಯುತ್ತಿರಬೇಕಾದ ಕೆಲಸವಾದ್ದರಿಂದ ಅವರಿಗೆ ರಜೆ ಸಿಕ್ಕುತ್ತಿಲ್ಲ ನಿಜ. ಮತ್ತು ಅವರಿಗೆ ಆ ವಾರದಲ್ಲಿ ಬೇರೆ ದಿನ ರಜೆ ಕೊಡತಕ್ಕಂತಹ ಪದ್ಧತಿ ಇದೆ ಎಂಬುದನ್ನು ಸನ್ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆ ಎಂದು ನಾನು ಭಾವಿಸುತ್ತೇನೆ. ಏನೋ ವ್ಯತ್ಯಾಸ ಇದೆ, ತಾರತಮ್ಯ ಇದೆ ಎಂದು ಹೇಳಿದ್ದಾರೆ, ನಾನು ಈ ಒಂದು ಉತ್ತರವನ್ನು ಕೊಟ್ಟರೂ ಅವರಿಗೆ ಸಮಾಧಾನವಾಗದೇ ಇರಬಹುದು. ನಾನು ಅದನ್ನು ಮತ್ತೆ ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

### ಶಾಸನ ರಚನಾ-ಕಾರ್ಯ ಕಲಾಪಗಳು

## THE KARNATAKA IMPROVEMENT BOARDS (AMETDMENT) BILL, 1986.

### *Motion to Consider*

SRI A. LAKSHMISAGAR (Minister for Law, Parliamentary Affairs, Food and Civil Supplies).—Sir, I beg to move :

> "That the Karnataka Improvement Boards (Amendment Bill, 1986 be taken into consideration."

*The question was proposed*

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ವಿಶೇಷವಾದದ್ದು ಏನೂ ಇಲ್ಲ. ಮುಖ್ಯವಾದ ವಿಚಾರ ಇದರಲ್ಲಿ ಪ್ರಸ್ತಾಪವಾಗಿರುವುದು, ಬಾಗಲಕೋಟೆ, ಟೌನ್ ಡೆವೆಲಪ್‌ಮೆಂಟ್ ಅಥಾರಿಟಿ ಬಗ್ಗೆ ಒಂದು ಹೈಲೆವೆಲ್ ಕಮಿಟಿ ಎಂದು ಇದೆ. ಆ ಹೈಲೆವೆಲ್ ಕಮಿಟಿಯಲ್ಲಿ ನಗರಾಭಿವೃದ್ಧಿ ಸಚಿವರಿಗೆ ಅವಕಾಶ ಇಲ್ಲ. ಪದೇ ಪದೇ ಅಲ್ಲಿ ನಡೆಯತಕ್ಕಂತಹ ಕೆಲಸವನ್ನು ಪರಿಶೀಲನೆ